ಬದುಕಿರುವೆ.

ಖ್ಯಾತ ಗ್ರೀಕ್ ವೈದ್ಯನಾದ ಹಿಪ್ಪೋಕ್ರೆಟಿಸ್ ಹೇಳುತ್ತಾನೆ: **All disease begins in the gut.** ಈ ಮಾತಿನ ಅರ್ಥ: 'ಎಲ್ಲಾ ರೋಗಗಗಳು ಉದ್ಭವಿಸುವುದು ಹೊಟ್ಟೆ ಮತ್ತು ಕರುಳಿನಿಂದಲೇ'. ಆಯುರ್ವೇದ ಆಚಾರ್ಯ ಚರಕನು ತನ್ನ 'ಚರಕ ಸಂಹಿತೆ' ಎಂಬ ಗ್ರಂಥದಲ್ಲಿ, 'ರೋಗ ಸರ್ವೇ ಅಪಿ ಮಂದಾಗ್ನಿ' ಎನ್ನುತ್ತಾನೆ. ಅಂದರೆ, ಎಲ್ಲ ರೋಗಗಳು ಉದ್ಭವಿಸುವುದು ಜೀರ್ಣಶಕ್ತಿಯ ಕೊರತೆಯಿಂದ. ಆದ್ದರಿಂದ ಹೊಟ್ಟೆ ಮತ್ತು ಕರುಳು ಚೆನ್ನಾಗಿದ್ದರೆ ಮನುಷ್ಯನ ಆರೋಗ್ಯ ಚೆನ್ನಾಗಿರುತ್ತದೆ. ಒರತೆ ನೀರಿನ ಮಹಿಮೆ ಅಡಗಿರುವುದು ಇದೇ ಸೂತ್ರದಲ್ಲಿ. ಆ ನೀರನ್ನು ನಿಯಮಿತವಾಗಿ ಉಪಯೋಗಿಸುವವರಿಗೆ ಪಚನಕ್ರಿಯೆ ನಿರಾಯಾಸವಾಗಿ ಜರುಗುವುದರಿಂದ ಒಂದು ಎರಡು ಸಲೀಸಾಗಿ, ದೇಹದ ಆರೋಗ್ಯ ಚೆನ್ನಾಗಿರುತ್ತಿತ್ತು. ಆದರೆ ಒರತೆ ನೀರನ್ನು ಮೊದಲ ಬಾರಿ ಸೇವಿಸಿ ದಕ್ಕಿಸಿಕೊಳ್ಳುವುದು ಅಷ್ಟೇ ಕಠಿಣ.

ಮೊದಲ ಬಾರಿ ಒರತೆ ನೀರು ಸೇವಿಸಿದವರಿಗೆ ಶೀತ, ಕೆಮ್ಮು, ಜ್ವರ ಕಟ್ಟಿಟ್ಟ ಬುತ್ತಿ. ಒಂದು ಬಾರಿ ನಿಯಮಿತವಾಗಿ ಸೇವಿಸಿ ಹೊಂದಿಕೊಂಡುಬಿಟ್ಟರೆ ಅದು ಅಮೃತವೇ ಸರಿ. ಹಲವಾರು ಬಾರಿ ಪಕ್ಕದ ಊರಿನವರು ನಮ್ಮೂರಿನ ಒರತೆ ನೀರನ್ನು ಸೇವಿಸಿ ಶೀತಜ್ವರಕ್ಕೆ ತುತ್ತಾದದ್ದುಂಟು. ಒಂದು ಬಾರಿ ನನ್ನ ಪರ ಊರಿನ ಗೆಳೆಯ ನಮ್ಮೂರ ಒರತೆ ನೀರು ಕುಡಿದದ್ದರಿಂದ ನಾಲಿಗೆ ಅಲ್ಲಲ್ಲಿ ಸೀಳಿಹೋಗಿತ್ತು. ಗಂಟಲು ಒಡೆದು ಮಾತನಾಡಲೂ ಕಷ್ಟವಾಗಿತ್ತು. ಮಾತನಾಡಲು ಕಷ್ಟವಾದರೂ ನನಗೆ ಕರೆ ಮಾಡಿ ಕರ್ಕಶ ಧ್ವನಿಯಲ್ಲಿ, 'ಕುಡಿಯೋದಕ್ಕೆ ಯಾವ ನೀರು ಕೊಟ್ಟಿದ್ಯೋ ಮಾರಾಯ. ಆ ನೀರು ಕುಡಿದಾಗಿನಿಂದ ನನ್ನ ಕರವಸ್ತ್ರಕ್ಕೆ ಒಂದು ಚೂರೂ ಬಿಡುವಿಲ್ಲ' ಎಂದು ಬೈದದ್ದುಂಟು.

ಊರಿನ ಹೆಂಗಸಿರಿಗಂತೂ ಒರತೆ ನೀರೆಂದರೆ ಬಹಳ ಅಚ್ಚುಮೆಚ್ಚು. ಒಂದು ತೊಟ್ಟು ಪೋಲಾಗದಂತೆ ನೋಡಿಕೊಳ್ಳುತ್ತಿದ್ದರು. ಒಲೆಯ ಮೇಲಿಟ್ಟು ಅರ್ಧ ಗಂಟೆ ಬೇಯಿಸಿದರೂ ಅಥವಾ ಕುಕ್ಕರ್‌ನಲ್ಲಿಟ್ಟು ನಾಲ್ಕೈದು ಸೀಟಿ ಹೊಡೆಯಿಸಿದರೂ ಬೇಯದ ಬೇಳೆಕಾಳು ಅದೇ ಒರತೆ ನೀರಿನಲ್ಲಿ ಬೇಯಿಸಿದರೆ ಕ್ಷಣ ಮಾತ್ರದಲ್ಲಿ ಬೆಂದು ಮುದ್ದೆಯಾಗಿಬಿಡುತ್ತಿದ್ದವು. ಇದೇ ಕಾರಣಕ್ಕೆ ಊರಿನ ಹೆಂಗಸರಿಗೆ ಒರತೆ ನೀರೆಂದರೆ ಬಂಗಾರಕ್ಕಿಂತಲೂ ಹೆಚ್ಚು.

ಮಳೆಗಾಲದಲ್ಲಿ ಒರತೆ ಬಾವಿ ತುಂಬಿ ಹರಿದರೆ, ಬೇಸಿಗೆಯಲ್ಲಿ ನೀರಿನ ಸೆಲೆ ಕಡಿಮೆಯಾಗಿ ಲೋಟದಿಂದ ಬಿಂದಿಗೆಗೆ ನೀರು ತುಂಬಬೇಕಾಗುತ್ತಿತ್ತು. ನನಗೆ ತಿಳಿವಳಿಕೆ ಬಂದಾಗಿನಿಂದ ಇಲ್ಲಿಯವರೆಗೆ ಎಂಥಾ ಕಡು ಬಿಸಿಲು, ಬರಗಾಲದಲ್ಲೂ ಒರತೆ ಬತ್ತಿದ್ದನ್ನು ನಾ ಕಂಡಿಲ್ಲ. ಅತ್ಯಂತ ಕಡಿಮೆ ಸರಾಸರಿ ಮಳೆಯಾಗುವ ನಮ್ಮೂರಿನಲ್ಲಿ ವರ್ಷಪೂರ್ತಿ ಜೀವಂತವಾಗಿರುವ ಅದೆಂಥ ನೀರಿನ ಸೆಲೆಯೋ? ಎಲ್ಲಿ ಹುಟ್ಟುತ್ತಿತ್ತೋ? ಎಂಬುದೇ ಆಶ್ಚರ್ಯದ ಸಂಗತಿ.

ಒರತೆ ನೀರು ತರಲು ಹೋಗುವುದೆಂದರೆ ಅದು ಎಲ್ಲರಿಗೂ ಒಂದು ಸಂಭ್ರಮವೇ ಸರಿ. ತಮ್ಮ ತಮ್ಮ ಓಣಿಯ ಹೆಂಗಸರು, ಹದಿಹರೆಯದ ಹುಡುಗರು, ಮುದುಕ ಮುದುಕಿಯರು ಸಮಯ ಮತ್ತು ತೂಕ ಇಳಿಸಿಕೊಳ್ಳುವ ಪ್ರಯತ್ನದಲ್ಲಿದ್ದವರು ಮಾತನಾಡಿಕೊಂಡು ತಮ್ಮ ತಮ್ಮ ಗುಂಪು ಕಟ್ಟಿಕೊಂಡು ನೀರು ತರಲು ಹೊರಡುತ್ತಿದ್ದರು.

ಸಾಮಾನ್ಯವಾಗಿ ಬೆಳಗ್ಗೆ ಸೂರ್ಯೋದಯಕ್ಕೂ ಮೊದಲು ಅಥವಾ ಎಳೆ ಬಿಸಿಲಿನಲ್ಲಿ ಅಥವಾ ಸಂಜೆ ಸೂರ್ಯಾಸ್ತವಾದ ಮೇಲೆ ಒರತೆಗೆ ಹೋಗುತ್ತಿದ್ದರು. ಮಳೆಗಾಲದಲ್ಲಿ ಒರತೆಗೆ ಹೋಗುವ ಹಾದಿ ರಮಣೀಯವಾಗಿರುತ್ತಿತ್ತು. ದಾರಿಯುದ್ದಕ್ಕೂ ಎಡ ಬಲಗಳಲ್ಲಿ ಹಚ್ಚ ಹಸುರಿನಿಂದ ಕಂಗೊಳಿಸುವ ಬೆಳೆಗಳು. ಬಂಡೆಗಳ ಮೇಲೆ ಅಲ್ಲಲ್ಲಿ ನಿಂತ ಮಳೆನೀರು ಮತ್ತು ಅದರೊಳಗೆ ಪ್ರತಿಫಲಿಸುತ್ತಿದ್ದ ಆಕಾಶದ ಪ್ರತಿಬಿಂಬ. ತಂಪು ಗಾಳಿಗೆ ಅತ್ತಿಂದಿತ್ತ ಇತ್ತಿಂದತ್ತ ಶಬ್ದ ಮಾಡುತ್ತಾ ಓಲಾಡುವ ಬೆಳೆಗಳು. ಸೂರ್ಯನ ಎಳೆ ಕಿರಣಗಳು ಬೆಳೆಗಳ ಎಲೆಗಳಿಂದ ಪ್ರತಿಫಲಿಸಿ ವಾತಾವರಣವನ್ನು ಕಂದು ಬಣ್ಣಕ್ಕೆ ತಿರುಗಿಸುತ್ತಿದ್ದವು. ಗುಡ್ಡದ ಕಲ್ಲುಗಳ ಸಂದುಗಳಿಂದ ಮೇಲೆದ್ದು ಗಾಳಿ ಬೀಸುವ ದಿಕ್ಕಿಗೆ ಓಲಾಡುತ್ತಿದ್ದ ಹಚ್ಚ ಹಸುರ ಕುರುಚಲು ಹುಲ್ಲು ನೃತ್ಯವಾಡಿದಂತೆ ಭಾಸವಾಗುತ್ತಿತ್ತು. ಒರತೆಯ ಪಕ್ಕ ಸ್ವಲ್ಪ ದೂರದಲ್ಲಿ ಗುಡ್ಡದಿಂದಿಳಿದ ಮಳೆ ನೀರು ಝರಿಯಾಗಿ ಬಂಡೆಯಲ್ಲಿ ತುಂಬಿ ಹರಿಯುತ್ತಿತ್ತು.

ಹದಿಹರೆಯದ ಹುಡುಗಿಯರು ತಲೆಗೆ ಎಣ್ಣೆ ಹಚ್ಚಿ, ಕೂದಲು ಬಾಚಿಕೊಂಡು, ಮುಖಕ್ಕೆ ಪೌಡರ್ ಮೆತ್ತಿಕೊಂಡು ಕುಂಕುಮವಿಟ್ಟುಕೊಂಡು ಸಿಂಗಾರಗೊಂಡರೆ, ಹದಿಹರೆಯದ ಹುಡುಗರು ಮುಖ ತೊಳೆದು ಕ್ರಾಪು ತೀಡಿ ಒರತೆ ನೀರು ತರಲು ಸಜ್ಜಾಗುತ್ತಿದ್ದರು. ಪ್ರೀತಿಯಲ್ಲಿ ಮುಳುಗಿದ್ದ ಕೆಲವು ಹುಡುಗ ಹುಡುಗಿಯರು ತಮ್ಮ ಪ್ರೇಯಸಿ ಅಥವಾ ಪ್ರಿಯಕರ ಯಾವಾಗ ಒರತೆಗೆ ಹೋಗುತ್ತಾನೆ/ಳೆ ಎಂದು ಕಾಯ್ದು ಅದೇ ಸಮಯಕ್ಕೆ ತಮ್ಮ ತಮ್ಮ ಸಂಗಡಿಗರನ್ನು ಜೊತೆಗೂಡಿಸಿಕೊಂಡು ಬಿಂದಿಗೆ ಹಿಡಿದು ಹೊರಡುತ್ತಿದ್ದುದುಂಟು. ದಾರಿಯಲ್ಲಿ ಒಬ್ಬರನ್ನೊಬ್ಬರು ನೋಡಿ ಕಿರುನಗೆ ಬೀರುತ್ತಾ ಒರತೆ ನೀರು ತಂದೇ ಕೆಲವು ಜೋಡಿಗಳು ಜೀವನದಲ್ಲಿ ಸಂಗಾತಿಗಳಾದದ್ದೂ ಉಂಟು. ಗಂಡ ಸತ್ತ ವಿಧವೆಯರು, ವಿರಹ ವೇದನೆಯಲ್ಲಿ ಬಳಲುತ್ತಿದ್ದ ಆಂಟಿಯರು ಸಿಂಗಾರಗೊಂಡು ಹದಿಹರೆಯದ ಹುಡುಗರತ್ತ, ಅಂಕಲ್‌ಗಳತ್ತ ವಾರೆನೋಟ ಬೀರಿ, ಅವರುಗಳೂ ಇವರತ್ತ ನೋಡಿ ಮುಗುಳ್ನಗುತ್ತಿದ್ದುದನ್ನು ನೋಡಿ ಪುಳಕಿತಗೊಂಡು ತಕ್ಕ ಮಟ್ಟಿಗೆ ತಮ್ಮ ವಿರಹ ವೇದನೆಯನ್ನು ಮರೆಯುತ್ತಿದ್ದರು.

ಮಳೆಗಾಲದಲ್ಲೇನೂ ಒರತೆ ಬಾವಿಯಲ್ಲಿ ಬಿಂದಿಗೆ ಮುಳುಗುವಷ್ಟು ನೀರಿರುತ್ತಿದ್ದರಿಂದ ಸರದಿಯಲ್ಲಿ ಕಾಯುವ ಪ್ರಸಂಗವಿರುತ್ತಿರಲಿಲ್ಲ. ಬೇಸಿಗೆಯಲ್ಲಿ

